ನನ್ನ ಓದು



ಸಬಿತಾ ಬನ್ನಾಡಿ

# ನಾನು ನೀನಾಗುವ 'ಪದ ಸಂಚಾರ'

**ಅವಳು ತಲೆ ಎತ್ತಿ ನೋಡಿದರೆ**
**ಆಕಾಶದ ತುಂಬ ಬೆಳಕು**
**ಅವಳ ಕಣ್ಣಲ್ಲಿ ತೇಲೋ ಮೋಡ**
**ಕಣ್ಣ ಮುಚ್ಚಿದರೆ**
**ಆಕಾಶಕ್ಕೇ ಕತ್ತಲು**
**ಮೋಡ ಒಡೆದು ದುಃಖ ಧಾರಾಕಾರ (ಅಮ್ಮನಿಗೆ)**

ತುಂಬಾ, ತುಂಬಾ ಆರ್ದ್ರವಾದ ಈ ಸಾಲುಗಳನ್ನು ಓದಿದಾಗ ಕವಿತೆ ಕವಿಯನ್ನು ದಾಟಿ ಹೃದಯಗಳನ್ನು ಮುಟ್ಟುವುದೆಂದರೆ ಹೀಗೇ ಅನ್ನುವ ಅನುಭವವಾಗುತ್ತದೆ. ಇದು ಒಂದು ಪರಿ. ಈ ಕವಿತೆಯಲ್ಲಿ ಇನ್ನೊಂದು ಪರಿಯೂ ಇದೆ. ಅದು ಅವಳು ಇವಳಾಗುವ, ಇವಳು ಅವಳಾಗುವ ಪರಿ. ಇದು ಮಮತಾ ಸಾಗರ ಅವರ ಹಲವು ಕವಿತೆಗಳಲ್ಲಿ ಕಾಣುವ, ಅವರ ಮೆಚ್ಚಿನ ಅಭಿವ್ಯಕ್ತಿಯ ರೀತಿ.

ಸ್ವಂತಿಕೆಗೆ, ಸ್ವಾತಂತ್ರ್ಯಕ್ಕೆ, ಸಮಾನತೆಗೆ ಮತ್ತು ಇದೆಲ್ಲದಕ್ಕೆ ಮೂಲವಾಗಿ ಪ್ರೀತಿ- ಪ್ರೇಮಕ್ಕೆ ಮಿಡಿಯುವ ಜೀವ ಮತ್ತು ಮಿಡಿವ ಭಾವ ಮಮತಾ ಕವಿತೆಗಳ ಅಂತರ್ಯವಾಗಿದೆ. ಜೊತೆಗೆ ಅಭಿವ್ಯಕ್ತಿಯಲ್ಲಿ ಅನನ್ಯತೆ ಸಾಧಿಸಿಕೊಂಡಿದ್ದು ಅವರ ಸಾಧನೆ. ಪೊಲಿಟಿಕಲ್ ಕರೆಕ್ಟ್‌ನೆಸ್ ಅವರಲ್ಲಿ ಕಾಣಿಸಲ್ಲ. ಪದಗಳ ಮಿತವ್ಯಯದೊಂದಿಗೆ ಪ್ರಬುದ್ಧ ಧ್ವನಿ ಹೊಮ್ಮುವುದು ವಿಶೇಷ. ಹೀಗಾಗಿ ಒಂದೇ ಓದಿಗೆ, ಒಂದೇ ಏಟಿಗೆ ಮಮತಾ ಕವಿತೆ ದಕ್ಕಿ ಬಿಡುತ್ತೆ ಅಂತ ಹೇಳೋಕಾಗಲ್ಲ. ಸ್ವಲ್ಪ ಕವಿತೆಯೊಳಗೆ ಇಳಿಯಬೇಕು. ಅವರ ಆರಂಭದ ಕವಿತೆಗಳಿಂದ ಈಚಿನ ಕವಿತೆಗಳ ತನಕವೂ ಇಂತಹ ಪಯಣ ಮುಂದುವರಿದಿದೆ. ವಸ್ತುಗಳು ದಿನ ದಿನದ ಅನುಭವಗಳೂ ಆಗಿರಬಹುದು, ನೋಟವೂ ಆಗಿರಬಹುದು. ಆದರೆ ಏನೇ ಆದರೂ ಎದುರಿಗಿರುವವರ ಮನಸಿನೊಳಗೆ ಪ್ರವೇಶಿಸಿ, 'ನಾನು', 'ನೀನೂ' ಆಗುವ ಚಲನೆಯೊಂದನ್ನು ಅವರ ಕವಿತೆಗಳು ಬಯಸುತ್ತವೆ. ಅನುಭವವೊಂದನ್ನು ಬಿಂಬಿಸುವಾಗ ಅದು ಯಾರ ಅನುಭವ? ಎಂಬ ಅಲೆ ಎಬ್ಬಿಸುವುದು ಅವರ ಕವಿತೆಯ ಗುಣಗಳಲ್ಲೊಂದು. 'ಪ್ರೀತಿಯ ಹುಡುಗ' ಎಂಬ ಕವಿತೆಯನ್ನು ಗಮನಿಸಿ- ಇದು ಯಾರ ಅನುಭವ? ನಿನ್ನದಾದರೂ ನನ್ನದೇ, ನನ್ನದಾದರೂ ನಿನ್ನದೇ ಎಂಬಂತೆ ಈ ಅದಲು ಬದಲು ಹೊರಗಿನದನ್ನು ಒಳಗಿನದಾಗಿಸಿ, ತನ್ನೊಳಗನ್ನು ಓದುಗರೊಳಗನ್ನಾಗಿಸಿ ಮಾಡುವ ಒಂದು ರೀತಿ ಇಲ್ಲಿದೆ.

**ಕೆನ್ನೆಯಂಚಿನ ಮೇಲೆ**
**ಸುಳಿದ ಬೆಚ್ಚನೆ ಉಸಿರು**
**ಅಲ್ಲೇ ಹಾಗೇ ಜೀಕು ಹಾಕುತ್ತಾ**
**ರೋಮ ರೋಮದಲ್ಲೂ ಸುಯ್‌ಗುಡುತ್ತಾ . . .**
**ಅದೊಂದು ಮಧುರ ನೆನಪು.**
**ಆಮೇಲೆ**
**ಅವನು ಅಲ್ಲಿ ಹಾಗೇ ತಣ್ಣಗೆ**
**ಮತ್ತೆ ಅರಳಿಸಲಾರ**
**ಮತ್ತೆ ಹೊರಳಿಸಲಾರ**
**ಅವನು ಹಾಗೇ!**
**'ಪ್ರೀತಿಯ ಹುಡುಗ' ಹಾಗೇ**
**ಮತ್ತೊಬ್ಬನೂ ಅವನ ಹಾಗೆ**
**'ಪ್ರೀತಿಯ ಹುಡುಗ'**